ಓ ಎಸ್ಃ 365/2020

ಪಿ ಡಬ್ಲ್ಯೂ ಃ 1

ದಿನಾಂಕಃ 21.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ವಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ವಿ ಎಸ್ ವಕೀಲರಿಂದಃ**

ನಾನು ದಾವಾ ಸ್ವತ್ತನ್ನು 23 ಐಟಂ ಸ್ವತ್ತುಗಳ ಮೇಲೆ ಹೂಡಿರುತ್ತೇನೆ. ನನಗೆ ಜಮೀನಿನ ಚೆಕ್ ಬಂದಿ ಮತ್ತು ಸ.ನಂ. ನ್ನು ಹೇಳಲಾಗುವುದಿಲ್ಲ. ದಾವಾ ಐಟಂಗಳು ನನ್ನ ತಾತನ ಸ್ವತ್ತುಗಳಾಗಿರುತ್ತವೆ. ನನ್ನ ತಾತನ ಹೆಸರು ಮುದ್ದಯ್ಯ ಇರುತ್ತದೆ. ಮುದ್ದಯ್ಯ ನವರಿಗೆ ಬೆಟ್ಟಯ್ಯ ಮತ್ತು ಮುದ್ದಯ್ಯ ಎಂಬ ಇಬ್ಬರು ಮಕ್ಕಳಿರುತ್ತಾರೆ. ಬೆಟ್ಟಯ್ಯ ಮತ್ತು ಮುದ್ದಯ್ಯ ನವರ ನಡುವೆ ಆಸ್ತಿ ಭಾಗ ಆಗಿರುತ್ತದೆ. ದಾವಾ ಸ್ವತ್ತುಗಳು ನನ್ನ ತಂದೆ ಮುದ್ದಯ್ಯ ನವರ ಹೆಸರಿಗೆ ಬಂದಿರುವ ಸ್ವತ್ತುಗಳಾಗಿರುತ್ತವೆ. ನನ್ನ ತಂದೆ ಮುದ್ದಯ್ಯ ನವರಿಗೆ 7 ಜನ ಮಕ್ಕಳಿರುತ್ತಾರೆ. ಅವರೆಂದರೆ ಸರೋಜಮ್ಮ , ರಾಜಶೇಖರ್ , ಪುಟ್ಟಸ್ವಾಮಯ್ಯ, ರೇಣುಕಮ್ಮ, ಶಿವಲಿಂಗಯ್ಯ , ಹೊನ್ನಪ್ಪ ಮತ್ತು ಗೌರಮ್ಮ ಇರುತ್ತೇವೆ. ರಾಜಶೇಖರ್ ರವರು ಮಾತ್ರ ತೀರಿಕೊಂಡಿರುತ್ತಾರೆ, ಇನ್ನು ಉಳಿದವರು ಬದುಕಿರುತ್ತಾರೆ.

ರಾಜಶೇಖರ್ ರವರಿಗೆ ಇಬ್ಬರು ಹೆಂಡತಿಯರಿದ್ದು ಮೊದಲನೆ ಹೆಂಡತಿ ಸರ್ವಮಂಗಳ ಮತ್ತು 2ನೆ ಹೆಂಡತಿ ಕರಿಬಸಮ್ಮ ಆಗಿರುತ್ತಾರೆ. ಮೊದಲನೆ ಹೆಂಡತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು ಸುಧಾ ಮತ್ತು ರೂಪ ಆಗಿರುತ್ತಾರೆ. 2ನೆ ಹೆಂಡತಿಗೆ ಮಕ್ಕಳಿರುವುದಿಲ್ಲ. ಅವರ 2ನೆ ಹೆಂಡತಿ ಜೀವಂತವಾಗಿರುತ್ತಾರೆ. ಕರಿಬಸಮ್ಮನವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಸ್ವತ್ತಿಗೆ ರಾಜಶೇಖರ್ ರವರ ಮೊದಲನೆ ಹೆಂಡತಿಯ 2ನೆ ಮಗಳಾದ ರೂಪ ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ಅದಕ್ಕೆ ಕಾರಣ ಅವರು ತೀರಿಕೊಂಡಿರುತ್ತಾರೆ.

6 ಮತ್ತು 7 ನೆ ಪ್ರತಿವಾದಿ ತಿಮ್ಮಯ್ಯ ಮತ್ತು ಮಂಜುನಾಥ ರವರು ನಮ್ಮ ಸಂಬಂದಿಕರಲ್ಲ. ನಮಗೆ ಸೇರಿದ 1 ಎಕರೆ 26 ಗುಂಟೆ ಜಮೀನನ್ನು ರಾಜಶೇಖರ್ ರವರು ತಿಮ್ಮಯ್ಯ ನವರಿಗೆ ಮಾರಿದ್ದರು,ಅದರ ಬಗ್ಗೆ ನನಗೆ ಗೊತ್ತಿಲ್ಲ. ಆದ್ದರಿಂದ ಅವರನ್ನು ಇಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ತಿಮ್ಮಯ್ಯ ರವರು ಮಂಜುನಾಥ ರವರಿಗೆ ಸದರಿ ಜಮೀನನ್ನು ಮಾರಾಟ ಮಾಡಿದ ನಂತರ ನನಗೆ ಗೊತ್ತಾಗಿರುತ್ತದೆ, ಆದ್ದರಿಂದ ಮಂಜುನಾಥ ರವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ತಿಮ್ಮಯ್ಯ ನವರಿಗೆ 2006-07 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ.

**ಮುಂದುವರೆದ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ